# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 1676+1768 |
| ಸದಸ್ಯರ ಹೆಸರು | : | ಶ್ರೀ ಬಸವರಾಜ ಪಾಟೀಲ್ ಇಟಗಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಹಾಗೂ<br>ಶ್ರೀ ಅರವಿಂದ ಕುಮಾರ್ ಅರಳಿ (ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ: | : | 19.03.2021 |
| ಉತ್ತರಿಸುವ ಮಾನ್ಯ ಸಚಿವರು | : | ಕೃಷಿ ಸಚಿವರು |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ). | ರಾಯಚೂರು ಹಾಗೂ ಬೀದರ್ ಜಿಲ್ಲೆಗಳ ರೈತರುಗಳಿಗೆ ಕೇಂದ್ರ ಸರ್ಕಾರದಿಂದ ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ಯೋಜನೆ ಅಡಿಯಲ್ಲಿ ರೈತರಿಗೆ ವರ್ಷಕ್ಕೆ ರೂ.6000/- ರಂತೆ ಹಾಗೂ ರಾಜ್ಯ ಸರ್ಕಾರದ ವತಿಯಿಂದ ಹೆಚ್ಚುವರಿಯಾಗಿ ರೂ.4000/- ಗಳನ್ನು ಕಂತುಗಳಲ್ಲಿ ನೀಡಲಾಗಿದೆಯೇ; ಹಾಗೂ ಇಲ್ಲಿಯವರೆಗೆ ಬಿಡುಗಡೆಯಾದ ಮೊತ್ತವೆಷ್ಟು; | ರಾಯಚೂರು ಜಿಲ್ಲೆ ಹಾಗೂ ಬೀದರ್ ಜಿಲ್ಲೆಗಳ ರೈತರುಗಳಿಗೆ ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆ ಅಡಿಯಲ್ಲಿ ಕೇಂದ್ರ ಸರ್ಕಾರದಿಂದ ವಾರ್ಷಿಕ ರೂ.6000/- (3 ಕಂತುಗಳಲ್ಲಿ) ಹಾಗೂ ರಾಜ್ಯ ಸರ್ಕಾರದಿಂದ ವಾರ್ಷಿಕ ರೂ.4000/- (2 ಕಂತುಗಳಲ್ಲಿ) ಆರ್ಥಿಕ ನೆರವನ್ನು ನೀಡಲಾಗುತ್ತಿದೆ.<br>ರಾಯಚೂರು ಹಾಗೂ ಬೀದರ್ ಜಿಲ್ಲೆಗಳ ರೈತರಿಗೆ ಈವರೆಗೂ ವರ್ಗಾವಣೆಯಾಗಿರುವ ಆರ್ಥಿಕ ನೆರವಿನ ವಿವರ ಈ ಕೆಳಕಂಡಂತಿದೆ: |

(ರೂ.ಕೋಟಿಗಳಲ್ಲಿ)

| ಜಿಲ್ಲೆಗಳು | ಪಿ.ಎಂ.ಕಿಸಾನ್ | ಪಿ.ಎಂ.ಕಿಸಾನ್ -ಕರ್ನಾಟಕ | ಒಟ್ಟು |
|---|---|---|---|
| ರಾಯಚೂರು | 234.08 | 75.52 | **309.60** |
| ಬೀದರ್ | 196.04 | 62.55 | **258.59** |

Under Pradhana Mantri Kissan Samman Nidhi Scheme financial benefit of Rs.6000/- per year from Central Government and Rs.4000/- per year from State Government has been transferred in installments.

The details of Financial Benefit so far transferred to Farmers of Raichur and Bidar is as follows:

(Rs. in Crores)

| Districts | PM-KISAN | PM-KISAN-Karnataka | Total |
|---|---|---|---|
| Raichur | 234.08 | 75.52 | **309.60** |
| Bidar | 196.04 | 62.55 | **258.59** |

| | | |
|---|---|---|
| ಆ) | ಸದರಿ ಯೋಜನೆ ಅಡಿಯಲ್ಲಿ ರಾಯಚೂರು ಜಿಲ್ಲೆಯ ವ್ಯಾಪ್ತಿಯಲ್ಲಿ ಪ್ರಯೋಜನ ಪಡೆದಿರುವ ರೈತರೆಷ್ಟು; | ಸದರಿ ಯೋಜನೆಯಡಿ ರಾಯಚೂರು ಜಿಲ್ಲೆಯಲ್ಲಿ ಪ್ರಯೋಜನ ಪಡೆದಿರುವ ಒಟ್ಟು ರೈತರ ಸಂಖ್ಯೆ:212140.<br><br>Total number of farmers benefited under this scheme is 212140. |
| ಇ) | ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ಈ ಯೋಜನೆಗೆ ಬಿಡುಗಡೆಯಾಗಿರುವ ಹಣವೆಷ್ಟು ಮತ್ತು ಎಷ್ಟು ಜನ ರೈತರ ಬ್ಯಾಂಕ್ ಖಾತೆಗೆ ಜಮೆ ಮಾಡಲಾಗಿದೆ (ವಿವರ ಒದಗಿಸುವುದು) | ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆಯಡಿ ಕೇಂದ್ರ ಸರ್ಕಾರದಿಂದ 2018-19 ರಿಂದ 2020-21 ರವರೆಗೆ **5396762** ಅರ್ಹ ಫಲಾನುಭವಿಗಳಿಗೆ ರೂ.**5828.87** ಕೋಟಿ ಆರ್ಥಿಕ ನೆರವು ವರ್ಗಾವಣೆಯಾಗಿರುತ್ತದೆ.<br><br>ಪಿ.ಎಂ.ಕಿಸಾನ್ ಕರ್ನಾಟಕ ಕಾರ್ಯಕ್ರಮದಡಿ ರಾಜ್ಯ ಸರ್ಕಾರದಿಂದ 2019-20 ಹಾಗೂ 2020-21ನೇ ಸಾಲಿನಲ್ಲಿ 5109730 ಅರ್ಹ ಫಲಾನುಭವಿಗಳಿಗೆ ಒಟ್ಟು ರೂ.1929.70 ಕೋಟಿ ಆರ್ಥಿಕ ನೆರವು ವರ್ಗಾವಣೆಗೆ ಮಂಜೂರಾತಿ ನೀಡಲಾಗಿರುತ್ತದೆ.<br><br>Under Pradhana Mantri Kissan Samman Nidhi Yojane an amount of Rs.**5828.87** crore has been transferred to **5396762** eligible beneficiaries by the Government of India from 2018-19 to 2020-21.<br><br>Under PM-KISAN-Karnataka State Government has approved financial transfer for **Rs.1929.70** crore to **5109730** eligible beneficiaries for 2019-20 and 2020-21. |
| ಈ) | ರಾಯಚೂರು ಜಿಲ್ಲೆ ವ್ಯಾಪ್ತಿಯ ರೈತರಿಗೆ ಬ್ಯಾಂಕ್ ಖಾತೆಗೆ ಹಣ ಜಮೆಯಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ ಕೈಗೊಂಡ ಕ್ರಮವೇನು? | ಬಂದಿದೆ.<br><br>ಭಾರತ ಸರ್ಕಾರಕ್ಕೆ ಸಲ್ಲಿಸಲಾದ ಫಲಾನುಭವಿಗಳ ಪೈಕಿ ಮುಖ್ಯವಾಗಿ ಬ್ಯಾಂಕ್ ಖಾತೆಗೆ ಸಂಬಂಧಿತ ತಾಂತ್ರಿಕ ಕಾರಣಗಳಿಂದಾಗಿ (4088 ರೈತರು) ಹಾಗೂ ಆಧಾರ್ ದಾಖಲೆಯನ್ವಯ ಭಾರತ ಸರ್ಕಾರ ಪೋರ್ಟಲ್ ನಲ್ಲಿ ಹೆಸರು ಹೊಂದಾಣಿಕೆಯಾಗದಿರುವುದರಿಂದ (1081 ರೈತರು) ಧನ ಸಹಾಯ ವರ್ಗಾವಣೆಯಾಗಿರುವುದಿಲ್ಲ.<br><br>ಈ ಪ್ರಕರಣಗಳನ್ನು ಬಗೆಹರಿಸಿಕೊಳ್ಳಲು ರೈತರು ತಮ್ಮ ಬ್ಯಾಂಕ್ ಖಾತೆಗೆ ಸಂಬಂಧಿಸಿದ ದಾಖಲೆ ಹಾಗೂ ಆಧಾರ್‌ನಂತೆ ಹೆಸರು ಸರಿಪಡಿಸಲು ಕ್ರಮಕೈಗೊಳ್ಳಬೇಕಾಗಿದ್ದು, ಈ ಬಗ್ಗೆ ರೈತರ ಮೊಬೈಲ್‌ಗೆ SMS ಮೂಲಕ ಸಂದೇಶ ನೀಡಿದೆ ಹಾಗೂ ವಿವಿಧ ಕನ್ನಡ ದಿನ ಪತ್ರಿಕೆಗಳಲ್ಲಿ ಪತ್ರಿಕಾ ಪ್ರಕಟಣೆ ನೀಡಲಾಗಿರುತ್ತದೆ. ಈ ಕುರಿತು ಕ್ರಮ ಕೈಗೊಳ್ಳಲು ಜಿಲ್ಲಾ ಜಂಟಿ ಕೃಷಿ ನಿರ್ದೇಶಕರುಗಳಿಗೆ ಸೂಚನೆ ನೀಡಲಾಗಿರುತ್ತದೆ ಹಾಗೂ ವಿವಿಧ ಬ್ಯಾಂಕ್ ಗಳಿಗೂ ಸಹ ಖಾತೆಗಳನ್ನು ಸರಿಪಡಿಸಲು ಕೂಡಲೇ ಕ್ರಮ ಕೈಗೊಳ್ಳುವಂತೆ ಕೋರಲಾಗಿರುತ್ತದೆ. |

| | | |
|---|---|---|
| | | Yes<br><br>It is mainly due to technical issues related to Bank account (4088 farmers) and Aadhaar name mismatch (1081 farmers).<br><br>Farmers are required to take necessary corrective measures to update name as in Aadhaar and also Bank account related records, for which SMS has been sent to their registered mobile numbers and press publications have been given in Kannada daily News papers. The District Joint Directors of Agriculture are instructed to take action in this regard and banks are also requested to take immediate action to correct account related issues. |
| ಉ) | ಸದರಿ ಯೋಜನೆಯ ಉದ್ದೇಶಗಳು ಹಾಗೂ ಮಾರ್ಗಸೂಚಿಗಳೇನು? (ವಿವರ ನೀಡುವುದು) | ಭಾರತ ಸರ್ಕಾರದ ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆಯಡಿ ರೈತರಿಗೆ ಕೃಷಿ ಚಟುವಟಿಕೆಯಲ್ಲಿ ಉತ್ತಮ ಪರಿಕರಗಳನ್ನು ಬಳಸಿ ಬೆಳೆಗಳ ಆರೋಗ್ಯ ನಿರ್ವಹಣೆ ಹಾಗೂ ಹೆಚ್ಚಿನ ಇಳುವರಿ ಪಡೆದು ನಿರೀಕ್ಷಿತ ಆದಾಯ ಗಳಿಸಲು ನೆರವಾಗುವ ಉದ್ದೇಶದಿಂದ ಸಾಗುವಳಿ ಭೂಮಿ ಹೊಂದಿರುವ (01.02.2019ರ ಒಳಗಾಗಿ ಸ್ವಾಧೀನದಲ್ಲಿರುವ /ಭೂದಾಖಲೆಯಲ್ಲಿ ಹೆಸರಿರುವ) ಎಲ್ಲಾ ಅರ್ಹ ರೈತ ಕುಟುಂಬಕ್ಕೆ (ಒಂದು ಕುಟುಂಬ ಎಂದರೆ ಗಂಡ, ಹೆಂಡತಿ ಮತ್ತು ಅಪ್ರಾಪ್ತ ಮಕ್ಕಳು) ವಾರ್ಷಿಕ ರೂ.6000/-ಗಳ ಆರ್ಥಿಕ ನೆರವನ್ನು ನೀಡಲಾಗುತ್ತಿದೆ. ಸದರಿ ನೆರವನ್ನು ರೂ.2000/-ಗಳಂತೆ ಮೂರು ಕಂತುಗಳಲ್ಲಿ ನಾಲ್ಕು ತಿಂಗಳಿಗೊಮ್ಮೆ ನೀಡಲಾಗುತ್ತಿದೆ.<br><br>ಕೇಂದ್ರ ಸರ್ಕಾರದ ಪಿ.ಎಂ.ಕಿಸಾನ್ ಯೋಜನೆಯ ಎಲ್ಲಾ ಅರ್ಹ ರೈತರಿಗೆ ದಿನಾಂಕ:14.08.2019 ರಿಂದ ರಾಜ್ಯ ಸರ್ಕಾರದಿಂದ ಹೆಚ್ಚುವರಿಯಾಗಿ ರೂ.4000/- ಗಳ ಆರ್ಥಿಕ ನೆರವನ್ನು ಎರಡು ಕಂತುಗಳಲ್ಲಿ ಪಿ.ಎಂ.ಕಿಸಾನ್- ಕರ್ನಾಟಕ ಯೋಜನೆಯಡಿ ನೀಡಲು ಆದೇಶ ಹೊರಡಿಸಲಾಗಿದೆ.<br><br>ಭಾರತ ಸರ್ಕಾರದ ಮಾರ್ಗಸೂಚಿಯನ್ವಯ ಆರ್ಥಿಕ ನೆರವನ್ನು ಪಡೆಯಲು ಅನರ್ಹ ವರ್ಗ:<br>1. ಭೂಮಿ ಹೊಂದಿರುವ ಸಂಘ ಅಥವಾ ಸಂಸ್ಥೆಗಳು.<br>2. ಕುಟುಂಬ ಸದಸ್ಯರು ಮಾಜಿ ಅಥವಾ ಹಾಲಿ ಸಾಂವಿಧಾನಿಕ ಹುದ್ದೆಗಳನ್ನು ಹೊಂದಿದ್ದಲ್ಲಿ,<br>3. ಕುಟುಂಬ ಸದಸ್ಯರು ಮಾಜಿ ಮತ್ತು ಹಾಲಿ ಸಚಿವರು/ರಾಜ್ಯ ಸಚಿವರು/ಲೋಕ ಸಭಾಸದಸ್ಯರು/ರಾಜ್ಯಸಭೆ ಸದಸ್ಯರು/ರಾಜ್ಯ ವಿಧಾನಸಭೆ/ವಿಧಾನ ಪರಿಷತ್ತಿನ ಸದಸ್ಯರು/ನಗರ ಸಭೆ ಅಧ್ಯಕ್ಷರು/ಪುರಸಭೆ ಅಧ್ಯಕ್ಷರು/ಜಿಲ್ಲಾಪಂಚಾಯಿತಿ ಅಧ್ಯಕ್ಷರು.<br>4. ಕುಟುಂಬ ಸದಸ್ಯರು ನಿವೃತ್ತಿ/ಹಾಲಿ ಸೇವೆಯಲ್ಲಿರುವ ಕೇಂದ್ರ/ ರಾಜ್ಯ ಸರ್ಕಾರಗಳ /ಸಚಿವಾಲಯ ಕಛೇರಿ/ಇಲಾಖೆ/ಕ್ಷೇತ್ರ ಕಛೇರಿಗಳು/ಕೇಂದ್ರ/ರಾಜ್ಯ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು/ ಅಂಗ |

ಸಂಸ್ಥೆಗಳು/ಸ್ವಾಯತ್ತ ಸಂಸ್ಥೆಗಳ ಅಧಿಕಾರಿಗಳು ಹಾಗೂ ನೌಕರರು/ಸ್ಥಳೀಯ ಸಂಸ್ಥೆಗಳ ಖಾಯಂ ನೌಕರರು (ಗ್ರೂಪ್ ಡಿ/4ನೇ ವರ್ಗ/ Multi Tasking Staff ಹೊರತುಪಡಿಸಿ).

5. ಕುಟುಂಬ ಸದಸ್ಯರು ರೂ.10,000/- ಅಥವಾ ಹೆಚ್ಚಿನ ಮೊತ್ತ ಪಡೆಯುತ್ತಿರುವ ವಯೋ ನಿವೃತ್ತ /ನಿವೃತ್ತ ಪಿಂಚಣಿದಾರರು. (ಗ್ರೂಪ್ ಡಿ/4ನೇ ವರ್ಗ/ Multi Tasking Staff ಹೊರತುಪಡಿಸಿ).
6. ಕುಟುಂಬ ಸದಸ್ಯರು ಕಳೆದ ಸಾಲಿನ ಆದಾಯ ತೆರಿಗೆ ಪಾವತಿದಾರರು, ವೈದ್ಯ, ಅಭಿಯಂತರ, ವಕೀಲ, ಲೆಕ್ಕ ಪರಿಶೋಧಕರು, ವಾಸ್ತುಶಿಲ್ಪದಂತಹ ವೃತ್ತಿಪರ ಸಂಸ್ಥೆಯಲ್ಲಿ ನೊಂದಾಯಿಸಿಕೊಂಡು ಸದರಿ ವೃತ್ತಿಯನ್ನು ಕೈಗೊಳ್ಳುತ್ತಿರುವವರು

Pradhan Mantri Kisan Samman Nidhi scheme of Government of India is being implemented since 01.02.2019 with a view to provide income support to all landholding farmers' families (a family comprising of husband, wife and minor children) for procuring various inputs to ensure proper crop health and appropriate yields, commensurate with the anticipated farm income as well as for domestic needs. Under the Scheme, each eligible farmer family is provided with financial assistance of Rs. 6000/- in three instalments of Rs.2000/- each.

The State Government has announced additional financial assistance of Rs.4,000/- in two installments under the PM-KISAN-Karnataka to all eligible farmers of the Central Government's PMKISAN scheme from 14.08.2019.

The following categories of beneficiaries of higher economic status shall not be eligible for benefit under the scheme:

a) All Institutional Land holders and Farmer families in which one or more of its members belong to following categories.
b) Former and present holders of constitutional posts
c) Former and present Ministers/ State Ministers and former/present Members of Lok Sabha/ Rajya Sabha/ State Legislative Assemblies/ State Legislative Councils, former and present Mayors of Municipal Corporations, former and present Chairpersons of District Panchayats.

| | | |
|---|---|---|
| | | d) All serving or retired officers and employees of Central/ State Government Ministries/Offices/Departments and its field units Central or State PSEs and Attached offices/ Autonomous Institutions under Government as well as regular employees of the Local Bodies (Excluding Multi Tasking Staff / Class IV/Group D employees)<br>e) All superannuated/retired pensioners whose monthly pension is Rs.10,000/- or more (Excluding Multi Tasking Staff / Class IV/Group D employees)<br>f) All Persons who paid Income Tax in last assessment year.<br>g) Professionals like Doctors, Engineers, Lawyers, Chartered Accountants, and Architects registered with Professional bodies and carrying out profession by undertaking practices. |

ಸಂಖ್ಯೆ: ಕೃಇ/52/ಕೃಕೈಉ/2021

(ಬಿ.ಸಿ.ಪಾಟೀಲ್)
ಕೃಷಿ ಸಚಿವರು